# 14

# ಚರಿತ್ರೆಯ ಹಾಗೂ ಭವಿಷ್ಯದ ಒಂದು ನೋಟ

# (8:1-7)

ಮಹತ್ವದ ಯಾಜಕತ್ವ ಎಂಬ ಚರ್ಚೆಯನ್ನು ನಾವುಗಳು ಮುಂದುವರೆಸುತ್ತಿದ್ದೇವೆ. ಅಧ್ಯಾಯ 5 ರಿಂದ 7ರ ವಾಕ್ಯದಲ್ಲಿ, ಕ್ರೈಸ್ತರಿಗಾಗಿರುವ ಯೇಸುವಿನ ಯಾಜಕೋದ್ಯೋಗ್ಯದ ವಿಚಾರವನ್ನು ಬರಹಗಾರನು ತರ್ಕಿಸಿರುವನು. ಅಧ್ಯಾಯ 9 ರಿಂದ 10 ರಲ್ಲಿ, ಯಾಜಕ ಸೇವೆಯ ಕುರಿತು ಚರ್ಚಿಸಿರುವನು. ಅಧ್ಯಾಯ 8 ಬದಲಾವಣೆಯ ಭಾಗವಾಗಿದೆ. ಅದು ಹಿಂದಿನದನ್ನು ನಿರ್ಣಯಿಸುತ್ತದೆ. ಮತ್ತು ನಂತರ ವಿಚಾರವನ್ನು ಪರಿಚಯಿಸುತ್ತದೆ.

## ಹಿಂದಿನ ವಿಚಾರದ ಕುರಿತು (8:1)

ಅನೇಕ ರಾತ್ರಿಗಳ ಸಮಯದಲ್ಲಿ ನೀವುಗಳು ಒಂದು ಕಥೆಯನ್ನು, ಒಂದು ಗುಂಪಿಗೆ ಹೇಳುತ್ತಿರುವಿರಿ ಎಂದು ಊಹಿಸಿಕೊಳ್ಳಿರಿ. ಪ್ರತಿರಾತ್ರಿ, ನೀವುಗಳು ಹಿಂದಿನ ರಾತ್ರಿ ಹೇಳಿದ ಕಥೆಯ ಸಾರಾಂಶವನ್ನು ಹೇಳಿ ಮುಂದುವರೆಸುವಿರಲ್ಲವೇ: ಇದೇ ವಿಧವಾಗಿ ಇಬ್ರಿಯ ಬರಹಗಾರನು 8 ನೇ ಅಧ್ಯಾಯವನ್ನು ಆರಂಭಿಸಿರುವನು. KJVಯಲ್ಲಿ ನಾವು "ಈಗಾಗಲೇ ಕೇಳಿರುವ *ಸಂಗತಿಗಳ ಸಾರಾಂಶ*" ಎಂದಿದೆ (ಒತ್ತಿ ಹೇಳಿದ್ದು ನನ್ನದು).

ಯೇಸುವಿನ ಯಾಜಕತ್ವದ ಕುರಿತಾಗಿ, ಅಧ್ಯಾಯ 7ರಲ್ಲಿ ತರ್ಕದ ಸರಣಿಯನ್ನೇ ಮುಂದುವರೆಸಿರುವನು. "ಈಗ ಹೇಳುವ ಸಂಗತಿ" ಎಂಬುದರಲ್ಲಿ ಅವೆಲ್ಲವೂ ಅಡಕವಾಗಿದೆ: "ಮಹತ್ವದ ಯಾಜಕನು ನಮಗಿದ್ದಾನೆ" ಎಂಬದೇ. 8:1ರಲ್ಲಿ, ಯೇಸು ಶ್ರೇಷ್ಟವಾದ ಯಾಜಕನು ಎಂದು ಆರಂಭಿಸಿರುವನು. (1) ಆತನು ಮಹತ್ವದ ಮಹಾ ಯಾಜಕನಾಗಿರುವದರಿಂದ ಮತ್ತು, (2) *ಪರಲೋಕದಲ್ಲಿ* ನಮಗಾಗಿ ಯಾಜಕೋದ್ಯೋಗವನ್ನು ಸಹ ಮಾಡುತ್ತಿದ್ದಾನೆ.

"ಮಹಾಯಾಜಕನು *ನಮಗಿದ್ದಾನೆ"* ಎಂಬ ಮಾತು ನಮಗೆ ಪ್ರಮುಖವಾಗಿದೆ (ಒತ್ತಿ ಹೇಳಿದ್ದು ನನ್ನದು). ಕ್ರಿ.ಶ. 70ರ ದೇವಾಲಯದ ನಾಶನದವರೆಗೆ, ಯೆಹೂದ್ಯರು ಯಾಜಕರನ್ನು ಹೊಂದಿದ್ದರು - ಆದರೆ ಇಲ್ಲಿ "ಯಾಜಕನನ್ನು ನಾವುಗಳು ಹೊಂದಿದ್ದೇವೆ" ಎಂಬ ವರ್ತಮಾನ ಕಾಲವಿದೆ. ಮಹಾಯಾಜಕನು ಯಾವಾಗಲೂ ಇರುತ್ತಾನೆ. ಆದ್ದರಿಂದ ದೇವರ ಬಳಿ ಹೋಗಲು ಯಾವಾಗಲೂ ಅನುಮತಿಯಿದೆ.[1]

## ಮುಂದಿನ ವಿಚಾರ (8:2-7)

### ದೇವದರ್ಶನದ ಗುಡಾರ (8:2-6ಎ)

ಕ್ರೈಸ್ತರು ಉತ್ತಮವಾದ ಸನ್ನಿಧಾನವನ್ನು ಹೊಂದಿರುವರು ಎಂದು ವಚನ 2ರಲ್ಲಿ ಆರಂಭಮಾಡಲಾಗಿದೆ. ಪ್ರಾಯಶಃ ಆತನ ವಂಶಾವಳಿಯೂ ಹೀಗಿರಬಹುದು:

(1) ಮಹಾಯಾಜಕನು ಯಜ್ಞವನ್ನರ್ಪಿಸಲು, ಏನನ್ನಾದರೂ ಹೊಂದಿರಬೇಕು, *ಮತ್ತು* ನಿರ್ಧಿಷ್ಟವಾದ ಒಂದು ಸ್ಥಳವನ್ನು ಸಹ ಹೊಂದಿರಬೇಕು (ವಚನ 3). "ಯೇಸು ಸಮರ್ಪಿಸಿದ ಕಾಣಿಕೆಯ" ಕುರಿತು 7:27ರಲ್ಲಿ ತಿಳಿಸಿರುವದನ್ನು, ಮುಂದೆ ಚರ್ಚಿಸೋಣ. ಈಗ "ಸ್ಥಳದ ಬಗ್ಗೆ" ಬರಹಗಾರನು ತಿಳಿಸುತ್ತಿದ್ದಾನೆ.

(2) ಎರಡು ಕಾರಣಗಳ ನಿಮಿತ್ತ, ಆತನು ಯಾವದೇ ಯಜ್ಞವನ್ನು ಭೂಮಿಯಲ್ಲಿ

ಸಮರ್ಪಿಸಲು ಸಾಧ್ಯವಾಗಲಿಲ್ಲ. ಭೂಮಿಯಲ್ಲಿ ಈಗಾಗಲೇ ಯಾಜಕರು ಇದ್ದರು ಮತ್ತು ಆತನು ಭೂಮಿಯಲ್ಲಿರಲಿಲ್ಲ (ವಚನ 4).

(3) ಆದರೆ ಆತನು ಪರಲೋಕದಲ್ಲಿ ಆ ಕಾಣಿಕೆಯನ್ನು ಸಮರ್ಪಿಸಿದನು, ಅದು ಆತನ ಸನ್ನಿಧಾನ (ವಚನಗಳು 1, 2).

(4) ಪರಲೋಕದ ಸನ್ನಿಧಾನವು ಮೋಶೆಯು ಭೂಮಿಯಲ್ಲಿ ನಿರ್ಮಿಸಿದ (ದೇವ ದರ್ಶನದ)[2] ಗುಡಾರಕ್ಕಿಂತಲೂ ಅಮೋಘವಾಗಿತ್ತು:

- ಭೂಮಿಯಲ್ಲಿ ನಿರ್ಮಾಣವಾದದ್ದು, ಪರಲೋಕ ದೇವಾಲಯದ ಪ್ರತಿರೂಪ ಹಾಗೂ ಛಾಯೆಯೂ ಆಗಿತ್ತು (ವಚನ 5).
- ಇಲ್ಲಿ ಧರ್ಮನಿಯಮದ ಕಾಣಿಕೆಗಳನ್ನು ಮಾತ್ರ ಸಮರ್ಪಿಸುತ್ತಿದ್ದರು (ವಚನಗಳು 4, 5ಎ).
- ದೇವರಿಂದ ನಿರ್ಮಿತವಾದದ್ದು ಮಾತ್ರ *ನಿಜವಾದ* ದೇವದರ್ಶನದ ಗುಡಾರವಾಗಿದೆ (ವಚನ 2).

(5) ಅದು ಅಮೋಘವಾದದ್ದು ಏಕೆಂದರೆ, ಅಲ್ಲಿ ಶ್ರೇಷ್ಟನಾದ ಮಹಾಯಾಜಕನು ಸೇವೆ ಸಲ್ಲಿಸುತ್ತಾನೆ (ವಚನ 2).[3] "ಯಾಜಕೊದ್ಯೋಗ" ಎಂದರೆ ಇತರರ ಪರವಾಗಿ ತನ್ನ ಸ್ವಂತ ವೆಚ್ಚದಲ್ಲಿ ಕಾರ್ಯ ನಿರ್ವಹಿಸುವವನು ಎಂಬ ಅರ್ಥವಿದೆ.[4] ಆದರೆ ಯೇಸು "*ಉತ್ತಮವಾದ* ಒಡಂಬಡಿಕೆಗೆ ಮಧ್ಯಸ್ತನಾಗಿದ್ದಾನೆ" (ವಚನ 6; ಒತ್ತಿ ಹೇಳಿದ್ದು ನನ್ನದು).

**ಒಡಂಬಡಿಕೆ (8:6, 7)**

ಯೇಸು ಉತ್ತಮವಾದ ಮಹಾಯಾಜಕ ಎಂಬದೇ ಬರಹಗಾರನ ಮುಖ್ಯ ಪ್ರಸ್ತಾಪವಾಗಿದೆ, ಆದರೆ ಇತರೆ ವಿಷಯಗಳ ಪ್ರಸ್ತಾಪವನ್ನು ಸಹ ಮುಂದುವರೆಸಲಾಗಿದೆ. ಅದರಲ್ಲಿ ಯಜ್ಞ, ಉತ್ತಮವಾದ ಸನ್ನಿಧಾನ ಹಾಗೂ ಉತ್ತಮವಾದ ಒಡಂಬಡಿಕೆ ಎಂಬ ವಿಷಯಗಳು ಅಡಕ ವಾಗಿವೆ.

- ಒಂದು ವೇಳೆ, ಯೇಸು ಉತ್ತಮವಾದ ಮಹಾಯಾಜಕನಾಗಿದ್ದರೆ, ಆತನು ಉತ್ತಮವಾದ ಯಜ್ಞವನ್ನು ಹೊಂದಿರಬೇಕು - ಅದು ಆತನೇ.
- ಆತನು ಉತ್ತಮವಾದ ಯಾಜಕನಾಗಿರುವದರಿಂದ, ಆತನು ಸೇವೆ ಮಾಡಲು ಉತ್ತಮವಾದ ಸ್ಥಳವನ್ನು ಹೊಂದಿರಬೇಕು - ಹೌದು ಆತನು ಪರಲೋಕದಲ್ಲಿ ಸೇವೆ ಸಲ್ಲಿಸುತ್ತಾನೆ.
- ಆತನು ಉತ್ತಮವಾದ ಯಾಜಕನಾಗಿದ್ದರೆ, ಆತನು ಉತ್ತಮವಾದ ಒಡಂಬಡಿಕೆಯನ್ನು ಹೊಂದಿರಬೇಕು. ಹೌದು, ಆತನು ಹೊಂದಿದ್ದಾನೆ. ಹಳೇ ಒಡಂಬಡಿಕೆಯು, ಲೇವಿಯ ವಂಶದವರಿಗೆ ಸಂಬಂಧಪಟ್ಟಿದ್ದರೆ, ಯೇಸು ತನ್ನ ಹೊಸ ಒಡಂಡಿಕೆಯ ಮೂಲಕ ಸತ್ಯವಾದ ಪಾಪಕ್ಷಮೆಯನ್ನು ನೀಡುತ್ತಾನೆ.

ಅಧ್ಯಾಯ 8ರ ಕಡೆಯ ಭಾಗದಲ್ಲಿ, ಉತ್ತಮವಾದ ಒಡಂಬಡಿಕೆಯ ಅಂಶವನ್ನು ನೀಡಲಾಗಿದೆ. ಹಿಂದಿನ ಅಧ್ಯಾಯದಲ್ಲಿ, "ಯೇಸು *ಶ್ರೇಷ್ಟವಾದ ಒಡಂಬಡಿಕೆಗೆ* ಹೊಣೆ ಗಾರನಾದನು" (7:22; ಒತ್ತಿ ಹೇಳಿದ್ದು ನನ್ನದು). ಅಧ್ಯಾಯ 8ರಲ್ಲಿ ಅವನು ಬರೆದು,

> ಆದರೆ ಯೇಸು ಅದಕ್ಕಿಂತ ಶ್ರೇಷ್ಠವಾದ ಯಾಜಕೋದ್ಯೋಗವನ್ನು ಹೊಂದಿದ ವನಾಗಿದ್ದಾನೆ; *ಉತ್ತಮ ವಾಗ್ದಾನಗಳ* ಮೇಲೆ ಸ್ಥಾಪಿತವಾದ ಉತ್ತಮವಾದ

ಒಡಂಬಡಿಕೆಗೆ ಮಧ್ಯಸ್ಥನಾಗಿದ್ದಾನೆ. ಆ ಮೊದಲನೆಯ ಒಡಂಬಡಿಕೆಯು ದೋಷ ವಿಲ್ಲದ್ದಾಗಿದ್ದರೆ ಎರಡನೆಯ ಒಡಂಬಡಿಕೆಗೆ ಅವಕಾಶವು ಇರುತ್ತಿರಲಿಲ್ಲ (8:6, 7; ಒತ್ತಿ ಹೇಳಿದ್ದು ನನ್ನದು).

ಯೇಸುವಿನಲ್ಲಾದ ಒಡಂಬಡಿಕೆಯು ಏಕೆ ಉತ್ತಮವಾದದ್ದು ಎಂದು ಬರಹಗಾರನು ಬರೆದಿರುವನು?

(1) *ಯಾಕೆಂದರೆ ಯೇಸು ತಾನೇ ಮಧ್ಯಸ್ತಿಕೆಗಾರನಾಗಿದ್ದಾನೆ* (ವಚನ 6ಎ). ಬರಹಗಾರನು ಯೇಸುವಿನ ಬಗ್ಗೆಯೇ ಪುನಃ ಮಾತಾಡುತ್ತಾನೆ. ಹಳೇ ಒಡಂಬಡಿಕೆಯಲ್ಲಿ, ಅಪೂರ್ಣನಾದ ಯಾಜಕನು ದೇವರಿಗೂ ಹಾಗೂ ಮನುಷ್ಯರಿಗೂ ನಡುವೆ ಮಧ್ಯಸ್ಥಗಾರನಾದನು. ಹೊಸ ಒಡಂಬಡಿಕೆಯಲ್ಲಿ ನಮ್ಮ ಪರಿಪೂರ್ಣನಾದ ಮಹಾಯಾಜಕನು ದೇವರ ಹಾಗೂ ನಮ್ಮ ನಡುವೆ ಮಧ್ಯಸ್ಥಿಕೆವಹಿಸಿದನು (1 ತಿಮೊಥೆ 2:5).

(2) *ಯಾಕಂದರೆ ಹೊಸ ಒಡಂಬಡಿಕೆಯು ಉತ್ತಮವಾದ ವಾಗ್ದಾನಗಳನ್ನು ಹೊಂದಿರುತ್ತದೆ* (ವಚನ 6ಬಿ). "ಉತ್ತಮವಾದ" ಅನೇಕ ವಾಗ್ದಾನಗಳ ನೆನಪು ಉಂಟಾಗುತ್ತದೆ.[5] ಅದರಲ್ಲಿ ಪರಿಪೂರ್ಣವಾದ ಹಾಗೂ ಕಡೆಯದಾದ ಪಾಪಕ್ಷಮೆಯು ಸಹ ಅಡಕವಾಗಿದೆ. ಅಧ್ಯಾಯ 8ರ ಅಂತ್ಯದಲ್ಲಿ ಉತ್ತಮವಾದ ವಾಗ್ದಾನಗಳ ಕುರಿತು ಹೇಳಲಾಗಿದೆ.

(3) *ಹಳೆಒಡಂಬಡಿಕೆಯ ಸಾಧಿಸಲಾರದ ಸಂಗತಿಗಳನ್ನು ಹೊಸ ಒಡಂಬಡಿಕೆಯು ಸಾಧಿಸಿದೆ.* ವಚನ 7ರಲ್ಲಿನ "ದೋಷ"ವಿಲ್ಲದ ಎಂಬ ಪದವು ಆಶ್ಚರ್ಯ ಮೂಡಿಸಬಹುದು. ಅಂದರೆ ಹಳೆ ಒಡಂಬಡಿಕೆಯು ದೋಷವುಳ್ಳದ್ದಾಗಿತ್ತೆ? ವಚನ 8ರಲ್ಲಿ, ದೋಷದ ಕುರಿತು, "ಆದರೆ ದೇವರು ಆ ಒಡಂಬಡಿಕೆಗೆ ಸೇರಿದವರ ಮೇಲೆ ತಪ್ಪು ಹೊರಿಸಿದನು." ವಚನ 9ರಲ್ಲಿ, ಅವರು ನನ್ನ ಒಡಂಬಡಿಕೆಯಲ್ಲಿ ಸ್ಥಿರವಾಗಿ ನಿಲ್ಲಲಿಲ್ಲ:

ಈ ಪತ್ರಿಕೆಯನ್ನು ಓದುವವರು, ಒಂದು ವೇಳೆ ಈ ಹೊಸ ಒಡಂಬಡಿಕೆಯಲ್ಲೂ ದೋಷ ವಿರಬಹುದು ಎಂದು ತಿಳಿಯಬಹುದು ಎಂದು ಬರಹಗಾರನು ಊಹಿಸಿರಬಹದು. ಆದ್ದರಿಂದ ಅವನು ತಕ್ಷಣವೇ ಯೆರೆಮೀಯ 31:31-34 ವಾಕ್ಯದಲ್ಲಿರುವ ಹಳೇ ಒಡಂಬಡಿಕೆಯು ಜನ ರೊಂದಿಗಿನ ಅಂತಿಮವಾದ ಒಪ್ಪಂದವಲ್ಲ ಎಂಬ ವಿಚಾರವನ್ನು ತಿಳಿಸಿದನು. ಇನ್ನೊಂದು ಪಾಠದಲ್ಲಿ ಈ ವಿಷಯವನ್ನು ಚರ್ಚಿಸೋಣ. ಸಧ್ಯಕ್ಕೆ ಒಂದು ಸರಳವಾದ ಸಾರಾಂಶವನ್ನು ನೀಡುತ್ತೇನೆ: ಭರವಸೆಯನ್ನು ನಿರ್ಮಿಸುವ ಉತ್ತಮವಾದ ಒಡಂಬಡಿಕೆಯನ್ನು ಯೇಸು ನಮಗಾಗಿ ನೀಡಿರುವನು.[6]

| ಕ್ರೈಸ್ತತತ್ವವು ಉತ್ತಮವಾದದ್ದೇ ಏಕೆ | |
|---|---|
| **ನಾವು ಏನನ್ನು ಹೊಂದಿದ್ದೇವೆ** | **ಇದು ನಮಗೆ ಏನನ್ನು ನೀಡುತ್ತದೆ** |
| **ಉತ್ತಮವಾದ** | **ದೇವರ ಬಳಿ** |
| **ಮಹಾಯಾಜಕನನ್ನು** | **ಪ್ರವೇಶಿಸುವ ಸ್ವಾತಂತ್ರ್ಯ** |
| **ಉತ್ತಮವಾದ** | **ಯೇಸು** |
| **ಸನ್ನಿಧಾನ** | **ನಮ್ಮ ಯಾಜಕೋದ್ಯನು** |
| **ಉತ್ತಮವಾದ** | **ಹೃದಯಕ್ಕೆ** |
| **ಒಡಂಬಡಿಕೆ** | **ಭರವಸೆ** |

ನಾವುಗಳು ಉತ್ತಮವಾದ ಮಹಾಯಾಜಕನನ್ನು, ಉತ್ತಮವಾದ ಸನ್ನಿಧಾನವನ್ನು ಮತ್ತು ಉತ್ತಮವಾದ ಒಡಂಬಡಿಕೆಯನ್ನು ಹೊಂದಿದ್ದೇವೆ. ಇದರೊಂದಿಗೆ ನಾವುಗಳು ಉತ್ತಮವಾದ ಯಜ್ಞಗಳನ್ನು ವಚನ 3; ವಾಗ್ದಾನಗಳನ್ನೂ ಸಹ ಹೊಂದಿದ್ದೇವೆ (ವಚನ 6). "ಹೊಸ ಒಡಂಬಡಿಕೆ" ಎಂಬ ಅಧ್ಯಾಯ 8ರ ಪಾಠದಲ್ಲಿ ಈ ವಿಚಾರವನ್ನು ಚರ್ಚಿಸೋಣ.

---

ಟಿಪ್ಪಣಿಗಳು

[1]ಕ್ರೈಸ್ತತ್ವವು ಉತ್ತಮ ಎಂಬ ಚಾರ್ಟನ್ನು ನೋಡಿರಿ. [2]ಅಧ್ಯಾಯ 9ರಲ್ಲಿ ದೇವದರ್ಶನದ ಗುಡಾರದ ಕುರಿತು ಚರ್ಚಿಸಲಾಗುವದು. [3]ಕ್ರೈಸ್ತತತ್ವದ ಚಾರ್ಟ್‌ನೋಡಿರಿ. [4]Neil R. Lightfoot, *Jesus Christ Today* (Grand Rapids, Mich.: Baker Book House, 1976), 154. [5]ಉತ್ತಮ ವಾಗ್ದಾನಗಳ ಕುರಿತು ಚರ್ಚಿಸಿರಿ. [6]ಚಾರ್ಟನ್ನು ನೋಡಿರಿ.